ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 01.02.2024.

**<u>ಪಾಟೀ ಸವಾಲುಃ ಎದುರುದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ</u>**

2 ನೇ ಎದುರುದಾರನ ಆರೋಗ್ಯ ಸರಿಯಾಗಿದೆ ಆತ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನೀಡಬಹುದು ಎಂದರೆ ನನಗೆ ಗೊತ್ತಿಲ್ಲ. ನನಗೆ ಮತ್ತು 2 ನೇ ಎದುರುದಾರನ ಮಧ್ಯ ಯಾವುದೇ ಮಾತುಕತೆ ಇಲ್ಲ. 2 ನೇ ಎದುರುದಾರ ನನ್ನನ್ನು ಬೇಟಿಯಾಗಿ ಈ ಕೇಸಿನ ಬಗ್ಗೆ ಏನು ಹೇಳಿರುವುದಿಲ್ಲ. 5 ನೇ ಎದುರುದಾರನನ್ನು ನಾನು ಬೇಟಿಯಾಗಿಲ್ಲ, ಈ ಕೇಸಿನ ಬಗ್ಗೆ ಚೌಕಾಶಿ ಮಾಡಿಲ್ಲ. ಸಾಕ್ಷಿ ಮುಂದುವರೆದು ಆತನ ಮುಖವನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಎದುರುದಾರ ಕೊಲೆ ಮಾಡಿರುತ್ತಾನೆ ಎಂದು ಆತನ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ದಾಖಲಾಗಿ ಆತ ಜೈಲಿನಲ್ಲಿ ಇದ್ದ ಎಂದರೆ ಸರಿ. 2 ನೇ ಎದುರುದಾರ ಸುಮಾರು 3 ವರ್ಷಗಳ ಕಾಲ ಜೈಲಿನಲ್ಲಿ ಇದ್ದ.

2 ನೇ ಎದುರುದಾರನಿಗೆ ಇಬ್ಬರು ಹೆಂಡತಿಯರು, ಅವರೇಂದರೆ ಮಂಗಳಾಬಾಯಿ ಮತ್ತು ಮಲ್ಲಮ್ಮ ಇರುತ್ತಾರೆ, ಸದರಿ ಇಬ್ಬರು ಹೆಂಡತಿಯರು ಜೀವಂತ ಇರುತ್ತಾರೆ. 1 ನೇ ಹೆಂಡತಿ ಮಂಗಳಾಬಾಯಿ ಇಂದ ಶರಣಬಸಪ್ಪ, ಲಕ್ಷ್ಮಿಬಾಯಿ ಮತ್ತು ಭೀಮೆಶ್ವರಿ ಜನಿಸಿರುತ್ತಾರೆ ಎಂದರೆ ಸರಿ. 2 ನೇ ಹೆಂಡತಿಗೆ ಚನ್ನಮಲ್ಲಪ್ಪ ಮತ್ತು ದೀನೆಶ್ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಅವರ ಪೈಕಿ ಚನ್ನಮಲ್ಲಪ್ಪ ತಿರಿಕೊಂಡಿರುತ್ತಾನೆ.

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**